ಸಂಖ್ಯೆ:ಪಿಪಿ3/ಕಲಬುರಗಿ/ಪ.ಪ್ರ/ /2021-22
ಎಸ್.ಸಿ.ನಂ:208/2015

3ನೇ ಸರಕಾರಿ ಅಭಿಯೋಜಕರ ಕಛೇರಿ
ಕಲಬುರಗಿ
ದಿನಾಂಕ:-11/01/2022

## ಪತ್ರಿಕಾ ಪ್ರಕಟಣೆ

## ಆರೋಪಿತರಿಗೆ 8 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ಹಾಗೂ ದಂಡ ವಿಧಿಸಿರುವ ಬಗ್ಗೆ.

**ಪ್ರಕರಣದ ಸಂಕ್ಷಿಪ್ತ ಸಾರಾಂಶ:-**

ಮಾನ್ಯ ಘನ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುವ ವಿಶ್ವವಿದ್ಯಾಲಯ ಪೊಲೀಸ ಠಾಣೆ ಶಹಾಬಾದ ಗುಲಬರ್ಗಾ ರಸ್ತೆಯ ಕೇಂದ್ರೀಯ ಶಾಲೆಯ ಹತ್ತಿರ ನೃಪತುಂಗ ಕಾಲೋನಿ ಗುಲಬರ್ಗಾ, ದಿನಾಂಕ: 19-11-2013 ರಂದು ರಾತ್ರಿ 12-00 ಎ.ಎಂ.ಕ್ಕೆ ಸಾಕ್ಷಿ ನಂ- 1 ಮಹೇಶ ತಂದೆ ಲಕ್ಷ್ಮಣ ನಾರಾಯಣಪೂರ ಸಾ// ಮುಸ್ತಾಪುರ ನೇದ್ದವನು ತನ್ನ ಲಾರಿ ನಂ- ಎಪಿ 13 ಎಕ್ಸ 3349 ನೇದ್ದರಲ್ಲಿ ವಾಡಿ ಕಂಪನಿಯಿಂದ 17 ಟನ್ ಸಿಮೆಂಟ ಲೋಡ ಮಾಡಿಕೊಂಡು ದಿನಾಂಕ:19-11-2013 ರಂದು ರಾತ್ರಿ 9-30 ಗಂಟೆಯಿಂದ ವಾಡಿಯಿಂದ ಹೊರಟು ಶಹಾಬಾದ ಮುಖಾಂತರ ನಂದೂರ ಮಾರ್ಗವಾಗಿ ಬರುತ್ತಿರುವಾಗ ಐ.ಟಿ.ಐ ದಾಟಿ ಕೇಂದ್ರೀಯ ಶಾಲೆ ಹತ್ತಿರ ರಾತ್ರಿ 12-00 ಗಂಟೆಯ ಸುಮಾರಿಗೆ ಹಿಂದಿನಿಂದ ಆರೋಪಿ ನಂ- 1) ಮಷ್ಕೂದ ಪಟೇಲ ತಂದೆ ಅಬ್ದುಲ್ ಕಲಾಂ 2) ಸಯ್ಯದ ಪಟೇಲ ತಂದೆ ಸೈಯ್ಯದ ಕೈದರ 3) ಸರವತ ಅಲಿ ತಂದೆ ಖಾಸಿಂ ಅಲಿ ಹಾಗೂ ಇತರರು ಸ್ಕಾರ್ಪಿಯೋ ವಾಹನ ನಂ-ಕೆ.ಎ 35 ಎಂ 4797 ನೇದ್ದರಲ್ಲಿ ಕುಳಿತುಕೊಂಡು ಬಂದವರೇ ಆರೋಪಿತರು ಸಾಕ್ಷಿ ನಂ- 1 ನೇದ್ದವನಿಗೆ ಲಾರಿಯಿಂದ ಕೆಳಗೆ ಇಳಿಯಿಸಿ ಕೈಯಿಂದ ಹೊಡಬಡೆ ಮಾಡಿ ಸಾಕ್ಷಿ ನಂ- 1 ನೇದ್ದವನ ಹತ್ತಿರ ಇದ್ದ 4000/- ರೂ ನಗದು ಹಣ ಮತ್ತು ಒಂದು ಮೈಕ್ರೋ ಮ್ಯಾಕ್ಸ ಮೋಬಾಯಿಲ್ ಜಬರ ದಸ್ತಿಯಿಂದ ಕಸಿದುಕೊಂಡು ಸಾಕ್ಷಿ ನಂ-1 ನೇದ್ದವನ ಶರ್ಟ ಬಿಚ್ಚಿ ಮುಖಕ್ಕೆ ಕಟ್ಟಿ ಸ್ಕಾರ್ಪಿಯೋ ವಾಹನದಲ್ಲಿ ಹಾಕಿದ್ದು ಆಗ ಆರೋಪಿತರೆಲ್ಲರೂ ಸಾಕ್ಷಿ ನಂ-1 ನೇದ್ದವನಿಗೆ ಸ್ಕಾರ್ಪಿಯೋ ವಾಹನದಲ್ಲಿ ಕೂಡಿಸಿಕೊಂಡು ಸಾವಳಗಿ ಸಿಮಾಂತರದಲ್ಲಿ ಬಿಟ್ಟಿದ್ದು, ನಂತರ ಲಾರಿ ನಂ- 13 ಎಕ್ಸ 3349 ನೇದ್ದನ್ನು ಗುಲಬರ್ಗಾ ನಗರದ ಸಾಕ್ಷಿ ನಂ- 15 ನೇದ್ದವರ ಹತ್ತಿರ ಇಟ್ಟಿದ್ದು, ದರೋಡೆ ಮಾಡಿದ ಲಾರಿ ನಂ ಎಪಿ 13 ಎಕ್ಸ 3349 ನೇದ್ದನ್ನು ಆರೋಪಿತರು ಕೇಂದ್ರ ಕಾರಾಗೃಹ ಹಿಂದುಗಡೆ ಬಿಟ್ಟು ಓಡಿ ಹೋಗಿರುತ್ತಾರೆ. ಎಂದು ಆರೋಪಿತರ ವಿರುದ್ಧ ತನಿಖೆ ಮಾಡಿ ತನಿಖಾಧಿಕಾರಿಗಳಾದ ಶ್ರೀ ಜೆ ಹೆಚ್.ಇನಾಮದಾರ ಪೊಲೀಸ್ ಠಾಣೆ, ತನಿಖೆ ಪೂರ್ಣಗೊಳಿಸಿ, ದೋಷಾರೋಪಣೆ ಪತ್ರ ಮಾನ್ಯ ನ್ಯಾಯಾಲಯದಲ್ಲಿ ಸಲ್ಲಿಸಿದ್ದರು.

ನಂತರ ಪ್ರಕರಣದ ವಿಚಾರಣೆಯನ್ನು ಮಾನ್ಯ ಶ್ರೀ. ಜಗದೀಶ್ ವ್ಹಿ.ಎನ್, 3ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಕಲಬುರಗಿ ನಡೆಸಿ, ನಂತರ ಸಾಕ್ಷ್ಯಾಧಾರಗಳನ್ನು ಪರಾಮರ್ಶಿಸಿ. 1) ಮಷ್ಕೂದ ಪಟೇಲ ತಂದೆ ಅಬ್ದುಲ್ ಕಲಾಂ 2) ಸೈಯ್ಯದ ಪಟೇಲ ತಂದೆ ಸೈಯ್ಯದ ಕೈದರ 3) ಸರವತ ಅಲಿ ತಂದೆ ಖಾಸಿಂ ಅಲಿ ಇವರ ವಿರುದ್ಧ ಅಪರಾಧ ಸಾಬೀತಾಗಿ, ತಪ್ಪಿತಸ್ಥರೆಂದು ನಿರ್ಣಯಿಸಿ, ಕಲಂ:-395, ಐಪಿಸಿ ಅಡಿಯಲ್ಲಿ 8 ವರ್ಷಗಳ ಕಠಿಣ ಕಾರಾಗೃಹ ವಾಸದ ಶಿಕ್ಷೆ ಮತ್ತು ತಲಾ ರೂ. 1,5000/-ಗಳ ದಂಡ ವಿಧಿಸಿದ್ದು, ಒಟ್ಟು ದಂಡದ ಮೊತ್ತ ರೂ 45,000/- ಗಳಲ್ಲಿ ದಂಡದ ಮೊತ್ತದಲ್ಲಿ ಫಿರ್ಯಾದಿದಾರರಿಗೆ ರೂ.25,000/- ಗಳನ್ನು ಪರಿಹಾರವಾಗಿ ನೀಡುವಂತೆ ಆದೇಶಿಸಿದ್ದು ಇರುತ್ತದೆ.

ಸರಕಾರದ ಪರವಾಗಿ ಶ್ರೀ ಗುರುಲಿಂಗಪ್ಪ ಶ್ರೀಮಂತ ತೇಲಿ, 3ನೇ ಅಪರ ಸರಕಾರಿ ಅಭಿಯೋಜಕರು ಕಲಬುರಗಿ ಇವರು ವಾದವನ್ನು ಮಂಡಿಸಿರುತ್ತಾರೆ.

(ಗುರುಲಿಂಗಪ್ಪ ಶ್ರೀಮಂತ ತೇಲಿ)
3ನೇ ಅಪರ ಸರಕಾರಿ ಅಭಿಯೋಜಕರು,
ಕಲಬುರಗಿ.ಮೊ.ನಂ: 9448390177

ಇವರಿಗೆ,
ಮಾನ್ಯ ಉಪ ನಿರ್ದೇಶಕರು,
ವಾರ್ತಾ ಮತ್ತು ಪ್ರಚಾರ ಇಲಾಖೆ ಕಲಬುರಗಿ. ಇವರಿಗೆ ಮಾಹಿತಿಗಾಗಿ ಸದರಿ ಪತ್ರಿಕಾ ಪ್ರಕಟಣೆಯನ್ನು ಎಲ್ಲಾ ಪ್ರಮುಖ ಕನ್ನಡ ಮತ್ತು ಇಂಗ್ಲಿಷ ದಿನಪತ್ರಿಕೆಯಲ್ಲಿ ಮುದ್ರಿಸಲು, ಕ್ರಮ ಕೈಗೊಳಲು ವಿನಂತಿ.